ಆಕೆ ಒಂದು ನಿಮಿಷ ಏನೂ ಮಾತಾಡಲಿಲ್ಲ. ಯಾವುದೋ ಎಕ್ಸರ್‌ಸೈಜ್ ಮಾಡುವವಳಂತೆ ಕಣ್ಣುಗುಡ್ಡೆಗಳನ್ನು ಗುಂಡಗೆ ತಿರುಗಿಸ್ತಾ ಕಣ್ಣೊಳಗಿದ್ದ ನೀರನ್ನು ಜಾಗ್ರತೆಯಿಂದ ಮೂಲೆಗಳಿಗೆ ಸರಿಸುತ್ತ ಇದ್ದುಬಿಟ್ಟಳು.

ಅನಂತರ ನಮ್ಮೆಡೆಗೇ ನೋಡುತ್ತ ತುಂಬಾ ಹೊತ್ತಿನ ನಂತರ ಗೌರವಪೂರ್ವಕವಾಗಿ ನಕ್ಕಳು.

'ಪರವಾಗಿಲ್ಲ ಬಿಡಿ. ಏನು ಮಾಡೋಕಾಗುತ್ತೆ. ನಿಮ್ಮ ಕಷ್ಟ ನೀವು ಹೇಳಿದಿರಿ. ಇನ್ನು ನಮ್ಮ ಪ್ರಾಪ್ತಿ ಇಷ್ಟೇ ಅಂತ ನಾವಂದುಕೊಳ್ಳಬೇಕು' ಎಂದು ಪಕ್ಕದಲ್ಲೇ ಇದ್ದ ಹುಡುಗನಿಗೆ 'ಚಿನ್ನೂ ಹೋಗೋಣ್ವೇನೋ ಕಂದಾ?' ಎಂದಳು.

ಅಲ್ಲಿವರೆಗೆ ನಮ್ಮ ಮಾತುಗಳನ್ನು ತಲೆಗೇ ಹತ್ತಿಸಿಕೊಳ್ಳದೆ, ಕಣ್ಣೆತ್ತಿ ಸುತ್ತಲಿನ ಪರಿಸರವನ್ನು ಕೂಡ ಗಮನಿಸದೆ ತನ್ನ ಪಾಡಿಗೆ ತಾನು ಮೊಬೈಲ್ ಫೋನಿನಲ್ಲಿ ಆಟವಾಡಿಕೊಳ್ಳುತ್ತಿದ್ದ ಚಿನ್ನು ಆಕೆಯತ್ತ ನೋಡಿ ತಲೆಯಾಡಿಸಿದ. ಅವನ ಮಡಿಲಲ್ಲಿ ಅರಿಸಿನ ಬಣ್ಣದ ಶಾಟಿನ್ ಕ್ಲಾತಿನಲ್ಲಿ ಸುತ್ತಿದ ಒಂದು ಹೊಸ ಕೀಬೋರ್ಡ್ ಇತ್ತು. ತುಂಬಾ ಹೊತ್ತು ಅದು ಅವನ ವೈಖರಿಗನುಗುಣವಾಗಿ ನಿರ್ಲಕ್ಷ್ಯವಾಗಿ ಜಾರುತ್ತಿರುವಂತೆ ವಾಲಿಕೊಂಡಿತ್ತು.

ಅವರಿಬ್ಬರೂ ಎದ್ದರು. ನಾನೂ ಎದ್ದೆ.

ಅಯ್ಯಪ್ಪ ನಮ್ಮಿಬ್ಬರನ್ನೂ ಕಾರಿನವರೆಗೆ ಬೀಳ್ಕೊಡಲು ಬಂದ.

ಜನವರಿ ತಿಂಗಳು.

ಚಳಿಗಾಲ.

ಅಕಾಲ ಮಳೆಯ ಸೋನೆಯಿಂದಾಗಿ ಏಳು ಗಂಟೆಗೇ ಒಂಬತ್ತೋ ಹತ್ತೋ ಆಗಿರುವಂತೆ ಕತ್ತಲು. ಚಳಿ. ಜೋರಾದ ಗಾಳಿ.

ಜುಬಿಲಿ ಹಿಲ್ಸ್‌ನಲ್ಲಿ ಬಂಬೂ ಪಾರ್ಕ್ ಹತ್ತಿರ ಇದ್ದೆವು.

ಆಕೆ ಬೆನ್ನು ತುಂಬ ಸೆರಗು ಹೊದ್ದುಕೊಳ್ಳುತ್ತ, ಸಶಬ್ದವಾಗಿ ದೊಡ್ಡ ದೊಡ್ಡ ಹೆಜ್ಜೆಗಳನ್ನಿಡುತ್ತ ಹೋಗಿ ಡ್ರೈವಿಂಗ್ ಸೀಟಿನಲ್ಲಿ ಕುಳಿತುಕೊಂಡಳು. ಚಿನ್ನು ಆಕೆಯ ಪಕ್ಕದಲ್ಲಿ ಕುಳಿತುಕೊಳ್ಳದೆ ಹಿಂದಿನ ಸೀಟಿನಲ್ಲಿ ಕುಳಿತುಕೊಂಡ.

ಆಕೆ ಹಾಗೆ ಮುಂದೆ ಸೀಟಲ್ಲಿದ್ದು ಕಾರು ನಡೆಸುತ್ತಿರಬೇಕಾದರೆ ಹಿಂದೆ ಕೂತುಕೊಳ್ಳುವುದು ಮರ್ಯಾದೆಯಲ್ಲ. ನಾನೂ ಅವನ ಪಕ್ಕದಲ್ಲಿಯೇ ಕುಳಿತುಕೊಳ್ಳಲೆಂದು ಏರುವ ಮೊದಲು ಅಯ್ಯಪ್ಪನಿಗೆ ಷೇಕ್‌ಹ್ಯಾಂಡ್ ಕೊಟ್ಟೆ.

'ಸಾರಿ ಕಣೋ. ನಿನಗೆ ತೊಂದರೆ ಕೊಟ್ಟಂತಾಯ್ತು. ಇವರು ನಮಗೆ ತುಂಬಾ ಬೇಕಾಗಿರೋ ಡಾಕ್ಟರು. ತುಂಬಾ ಕೇಳ್ತಾ ಇದ್ರು ಹಾಗಾಗಿ...' ಅಂದೆ.

ಅವನು ನನ್ನ ಕೈಯನ್ನು ಗಟ್ಟಿಯಾಗಿ ಒತ್ತುತ್ತ, 'ಹಾಗೇನಿಲ್ಲ. ನಾನೇ ನಿಂಗೆ ಡಿಸಪಾಯಿಂಟ್ ಮಾಡಿದೆ. ಏನೂ ಅಂದ್ಕೋಬೇಡ' ಅಂದ.

ಕಾರು ಕದಲಿತು.

ತಣ್ಣನೆಯ ಗಾಳಿ ಒಳಗೆ ಬರದಂತೆ ಕಿಟಕಿ ಗಾಜುಗಳನ್ನೆಲ್ಲ ಏರಿಸಿದ ಮೇಲೆ ಆಕೆ ಎರಡು ಮೂರು ಕೆಸೆಟ್‌ಗಳನ್ನು ಸರಿಸಿ ಒಂದನ್ನು ಆರಿಸಿ ಸಮಾಧಾನಕ್ಕೆಂಬಂತೆ ಹಾಡು ಹಚ್ಚಿದಳು. ಚಿನ್ನು ಕೀಬೋರ್ಡನ್ನು ಸೀಟು ಹಿಂದೆ ಬಿಸಾಕಿ ಮೇಲಿನ ಜೇಬಿನಿಂದ ಮೊಬೈಲ್ ಫೋನ್ ತೆಗೆದು ಮಿಣುಕುಹುಳುಗಳಂತೆ ಹೊಳೆಯುತ್ತಿರುವ ಬಟನ್ನುಗಳನ್ನು ಒತ್ತುತ್ತ ಮತ್ತೆ ಅವುಗಳಲ್ಲಿ ಮುಳುಗಿಹೋದ.